# <u>ಕರ್ನಾಟಕ ಲೋಕಾಯುಕ್ತ</u>

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.2882/2016/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು,ದಿನಾಂಕ: 4.8.2017.

## <u>ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ</u>

**ವಿಷಯ: ಸರ್ಕಾರಿ ನೌಕರರಾದ ಶ್ರೀ ಎಂ.ಕೆ.ಜಗದೀಶ್, ಸಹಾಯಕ ಆಯುಕ್ತರು, ದೊಡ್ಡಬಳ್ಳಾಪುರ ಉಪವಿಭಾಗ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ರವರ ವಿರುದ್ಧ ಕ್ರಮಕೈಗೊಳ್ಳುವ ಕುರಿತು.**

*******

ಶ್ರೀ. ಅಂಕಣ್ಣ ಗೌಡ, ತಂದೆ ನಾರಾಯಣಪ್ಪ, ಮಲ್ಲಸಂದ್ರ ಗ್ರಾಮದ ನಿವಾಸಿ, ನಡವತ್ತಿ ಅಂಚೆ, ಬೆಂಗಳೂರು.67, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) **ಶ್ರೀ ಎಂ.ಕೆ.ಜಗದೀಶ್, ಸಹಾಯಕ ಆಯುಕ್ತರು, ದೊಡ್ಡಬಳ್ಳಾಪುರ ಉಪವಿಭಾಗ, ಬೆಂಗಳೂರು ಗ್ರಾಮಾಂತರ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **<u>ದೂರಿನ ಸಂಕ್ಷಿಪ್ತ ವಿವರಣೆ:–</u>**

ದೂರುದಾರರು ತಮ್ಮ ದೂರಿನಲ್ಲಿ ಹೊಸಕೋಟೆ ತಾಲ್ಲೂಕು ಮಲ್ಲಸಂದ್ರ ಗ್ರಾಮದ ಸರ್ವೆ ನಂ.22/2 ಕ್ಷೇತ್ರ 2.23 ಗುಂಟೆ ಪೈಕಿ 1 ಗುಂಟೆ ಜಮೀನಿನ ಪಹಣಿ ಕಾಲಂ.ನಂ.12(2)ರಲ್ಲಿ 1970–71ರಿಂದ 1976ರವರೆಗೆ ನಾರಾಯಣಪ್ಪ ಬಿನ್ ಯಳಗಾನಪ್ಪ ಎಂಬ ಹೆಸರು ನಾರಾಯಣಪ್ಪ ಬಿನ್ ಪಿಳ್ಳಪ್ಪ ಎಂದು ಬದಲಾಗಿ ಅದರ ಕೆಳಗಿನ ಹೇಮಣ್ಣ ತಮ್ಮ ನಾರಾಯಣಪ್ಪ ಎಂಬುದಾಗಿ ಅಕ್ರಮವಾಗಿ ಸೇರ್ಪಡೆ ಮಾಡಲಾಗಿರುತ್ತದೆ. ಈ ಅಕ್ರಮ ಸೇರ್ಪಡೆಯನ್ನು ತಿದ್ದುಪಡಿ ಮಾಡಲು ಹೊಸಕೋಟೆ ತಹಶೀಲ್ದಾರರಿಗೆ ಆರ್.ಆರ್.ಟಿ.ಸಿ.ಆರ್.113/2014–15ರಂತೆ ದಿ.4.7.2014ರಂದು ತಹಶೀಲ್ದಾರರು ಉಪವಿಭಾಗಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸಲು ಹಿಂಬರಹ ನೀಡಿರುತ್ತಾರೆ. ಆ

ಪ್ರಕಾರ ದಿ.11.7.2014ರಂದು ಆರ್.ಎ.(ಹೆಚ್)69/2014-15ರಂತೆ ಪ್ರಕರಣ ದಾಖಲಿಸಿದ್ದು, ಎದುರುದಾರರು ಈ ಬಗ್ಗೆ ಹೊಸದಾಗಿ ನೋಟೀಸು ನೀಡದೆ 16.2.2016ರಂದು ಮೇಲ್ಮನವಿಯನ್ನು ವಜಾಗೊಳಿಸಿರುತ್ತಾರೆ. ದಿ.22.2.2016ರಂದು ಈ ಪ್ರಕರಣದ ಆದೇಶದ ದೃಢೀಕೃತ ನಕಲಿಗೆ ಅರ್ಜಿ ಸಲ್ಲಿಸಿದಾಗ ಸದರಿ ಕಡತ ಕಳೆದಿದೆಯೆಂದು ಹಿಂಬರಹ ನೀಡಿರುತ್ತಾರೆ. ಪುನ: ಮಾಹಿತಿ ಹಕ್ಕು ಅಧಿನಿಯಮ 2005ರಡಿಯಲ್ಲಿ ಇದೇ ದಾಖಲೆ ಕೋರಿ ಅರ್ಜಿ ಸಲ್ಲಿಸಿದಾಗ ಅದೇ ರೀತಿ ಕಡತ ಕಳೆದಿದೆಯೆಂದು ಹಿಂಬರಹ ನೀಡಿದಾಗ ಜಿಲ್ಲಾಧಿಕಾರಿಗಳಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಅವರು 10 ದಿನಗಳೊಳಗಾಗಿ ದಾಖಲೆ ನೀಡುವಂತೆ ಎದುರುದಾರರಿಗೆ ಆದೇಶಿಸಿರುತ್ತಾರೆ. ಆದರೆ ಸುಮಾರು 8 ತಿಂಗಳ ನಂತರ ದಿ.19.10.2016ರಂದು ದೃಢೀಕೃತ ನಕಲುಗಳನ್ನು ನೀಡಿದ್ದು, ಈಗ ಮೇಲ್ಮನವಿ ಸಲ್ಲಿಸಲಾಗದ ಸ್ಥಿತಿಯುಂಟಾಗಿರುತ್ತದೆ. ಆದ್ದರಿಂದ ಎದುರುದಾರರು ಹಾಗೂ ಅವರ ಸಿಬ್ಬಂದಿ ಭ್ರಷ್ಟಾಚಾರದಲ್ಲಿ ತೊಡಗಿದ್ದು, ಈ ಬಗ್ಗೆ ಪರಿಶೀಲಿಸಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಆರ್.ಎ.(ಹೊ)69/2014-15ರಲ್ಲಿ ವಿಚಾರಣೆ ನಡೆಸಿ ದಿ.16.2.2016ರಂದು ಅಂತಿಮ ಆದೇಶ ಮಾಡಲಾಗಿರುತ್ತದೆ. ಈ ಆದೇಶದಲ್ಲಿ ಸರ್ವೆ ನಂ.22/2 ಕ್ಷೇತ್ರ 2.23 ಎಕರೆ ಜಮೀನಿನ ಅನುಭೋಗದ ಹಕ್ಕನ್ನು ಬಿ.ನಾರಾಯಣಪ್ಪ ಬಿನ್ ಯಳನಾಗಪ್ಪ ಅವರಿಗೆ ಭೂನ್ಯಾಯಮಂಡಳಿಯ ಆದೇಶ ಸಂ. ಎಲ್.ಆರ್.ಎಫ್.1075/76-77 ದಿ.17.3.2010ರಲ್ಲಿ ಅನುಭೋಗದಾರರನ್ನಾಗಿ ಆದೇಶ ಮಾಡಿದ್ದು, ನೋಂದಣಿಯಾಗಿರುತ್ತದೆ. *ಈ ಆದೇಶದ ವಿರುದ್ಧ ರಿಟ್ ಸಂ.16188/2011 ಮತ್ತು* 36466/2010 ದಾಖಲಾಗಿದ್ದು, ದಿ.30.5.2012ರಂದು ವಜಾಗೊಂಡಿರುತ್ತವೆ. ಈ ಆದೇಶದ ವಿರುದ್ಧ ರಿಟ್ ಸಂ.4827/2012 ದಾಖಲಿಸಿದ್ದು, ದಿ.11.1.2013ರಂದು ವಜಾಗೊಂಡಿದ್ದು, ಭೂನ್ಯಾಯಮಂಡಳಿಯ ಆದೇಶ ಅಂತಿಮವಾಗಿರುತ್ತದೆ. ಆದ್ದರಿಂದ ಮೇಲ್ಮನವಿಯನ್ನು ವಜಾಕರಿಸಲಾಗಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

5. ದೂರುದಾರರು ಸಲ್ಲಿಸಿದ ದೂರು ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರು ತಮ್ಮ ಮುಂದೆ ದಾಖಲಾದ ಆರ್.ಎ.(ಹೊ)69/2014-15ರಲ್ಲಿ ದೂರುದಾರರಿಗೆ ನೋಟೀಸು ನೀಡದೆ ಆದೇಶ ಮಾಡಿರುತ್ತಾರೆಂದು ಆಪಾದಿಸಲಾಗಿದ್ದು, ಆದರೆ ದೂರುದಾರರಿಗೆ ಪ್ರಕರಣಕ್ಕೆ ಹಾಜರಾಗಲು ನೋಟೀಸು ನೀಡಿದ ಬಗ್ಗೆ ಆರ್ಡರ್ ಷೀಟಿನಲ್ಲಿ ದಾಖಲಾಗಿರುತ್ತದೆ. ಎದುರುದಾರರು ನೀಡಿದ ಆದೇಶದಿಂದ ದೂರುದಾರರು ಭಾಧಿತರಾಗಿದ್ದರೆ ಅವರು ಮೇಲ್ಮನವಿ ಸಲ್ಲಿಸಿ ಪರಿಹಾರ ಪಡೆದುಕೊಳ್ಳುವ ಅವಕಾಶ ಹೊಂದಿರುತ್ತಾರೆ.

6. ಆದರೆ ದೂರುದಾರರು ಪ್ರಕರಣ ಸಂ.ಆರ್.ಎ.69/2014-15ರ ಆರ್ಡರ್ ಷೀಟ್ ಹಾಗೂ ಅಂತಿಮ ಆದೇಶದ ದೃಢೀಕೃತ ನಕಲನ್ನು ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಕೋರಿದಾಗ ಎದುರುದಾರರು ಕಡತ ಕಳೆದಿದೆಯೆಂದು ಹಿಂಬರಹ ನೀಡಿರುತ್ತಾರೆ. ಅದರೆ ಕೇವಲ 1 ತಿಂಗಳೊಳಗಾಗಿ ದೂರುದಾರರು ದೃಢೀಕೃತ ನಕಲು ಕೋರಿ ಅರ್ಜಿ ಸಲ್ಲಿಸಿದ್ದು, ಅಷ್ಟರಲ್ಲಿಯೇ ಕಡತ ಕಳೆದಿದೆಯೆಂದು ಹಿಂಬರಹ ನೀಡಿರುವುದು ಎದುರುದಾರರ ಕರ್ತವ್ಯದಲ್ಲಿ ನಿರ್ಲಕ್ಷ ವಹಿಸಿದ್ದಾರೆಂದು ಕಂಡುಬರುತ್ತದೆ. ಈ ರೀತಿ ಕಡತ ಕಾಣೆಯಾದ ಬಗ್ಗೆ ತಮ್ಮ ಸಿಬ್ಬಂದಿಗಳ ವಿರುದ್ಧ ಯಾವ ಕ್ರಮ ಜರುಗಿಸಿದ್ದಾರೆನ್ನುವ ಬಗ್ಗೆ ಯಾವುದೇ ದಾಖಲೆ ಲಭ್ಯವಿರುವುದಿಲ್ಲ. ಆದರೆ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಬದಲಿ ಕಡತವನ್ನು ನಿಯಮಾನುಸಾರ ಮರುಸೃಷ್ಟಿಸಲಾಗಿರುತ್ತದೆಂದು ತಿಳಿಸಿರುತ್ತಾರೆ. ಆದರೆ ಇಷ್ಟು ಕಡಿಮೆ ಅವಧಿಯಲ್ಲಿ ಕಡತ ನಾಪತ್ತೆಯಾಗಿದ್ದನ್ನು ಗಮನಿಸಿದರೆ ದೂರುದಾರರ ಆಪಾದನೆಯಂತೆ ಎದುರುದಾರರು ಈ ಪ್ರಕರಣದ ಬಗ್ಗೆ ಯಾವುದೋ ಅಕ್ರಮ ವ್ಯವಹಾರದಲ್ಲಿ ತೊಡಗಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

7. ಒಂದು ಮೂಲ ಕಡತ ಕಾಣೆಯಾದ ಬಗ್ಗೆ ಹಾಗೂ ಅದನ್ನು ಮರುಸೃಷ್ಟಿಸುವ ಹಿಂದೆ ಅನೇಕ ಉದ್ದೇಶಗಳು ಅಡಗಿರುತ್ತವೆ. ಆದರೆ ಎದುರುದಾರರು ಕಡತ ಕಾಣೆಯಾದ ಬಗ್ಗೆ ಪಾರದರ್ಶಕವಾಗಿ ಯಾವ ಕ್ರಮ ಜರುಗಿಸಲಾಗಿರುತ್ತದೆಂಬ ಬಗ್ಗೆ ಯಾವುದೇ ಉತ್ತರ ನೀಡಿರುವುದಿಲ್ಲ. ಆದ್ದರಿಂದ ಎದುರುದಾರರು ಕೇವಲ 1 ತಿಂಗಳೊಳಗಾಗಿ ತಾವು ಆದೇಶಿಸಿದ ಪ್ರಕರಣದ ಕಡತವು ಕಾಣೆಯಾಗಿದ್ದು, ಅದರ ಬಗ್ಗೆ ಯಾವುದೇ ಸೂಕ್ತ ಕ್ರಮ ಜರುಗಿಸದೆ ಇದರಿಂದ ದೂರುದಾರರಿಗೆ

ವಿಳಂಬವಾಗಿ ದಾಖಲೆ ದೊರೆಯಲು ಕಾರಣರಾಗಿ, ಅವರು ಮೇಲ್ಮನವಿ ಸಲ್ಲಿಸಲು ಸ
ಕಾಲಪರಿಮಿತಿ ಮೀರಿ ಅವರಿಗೆ ಅನ್ಯಾಯವಾಗಿದೆಯೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

8. ಆದ್ದರಿಂದ, ಎದುರುದಾರರು ಸಾರ್ವಜನಿಕ/ ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ ಕರ್ತವ್ಯ ಲೋಪವೆಸಗಿ, ಸಾರ್ವಜನಿಕ/ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) (i) ಮತ್ತು (ii)ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎ ರಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು **ಉಪಲೋಕಾಯುಕ್ತರವರಿಗೆ** ವಹಿಸಬೇಕೆಂದೂ ಕೋರಲಾಗಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

Sd/- 4/8/17

[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.

4/8